**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**<u>ಸಿ.ಸಿ. ಸಂಖ್ಯೆ: 133/2023</u>**

ಚಾಸಾಃ 2 ಪ್ರಾಸಾ:2

| | | |
|---|---|---|
| ಹೆಸರು | : | ಎಸ್ ಆರ್ ಕೃಷ್ಣ |
| ಗಂಡನ/ತಂದೆಯ ಹೆಸರು | : | ರಾಮೇಗೌಡ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಖಾಸಗೀ ಕೆಲಸ |
| ವಾಸ | : | ಸುಳ್ಳೇರಿ ಗ್ರಾಮ. |

**<u>ದಿನಾಂಕ 05.06.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:</u>**

ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿರುವುದಿಲ್ಲ. ಮಹಜರ್ ಅನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿರುತ್ತಾರೆ ಅನುಮತಿಸಲಾಯಿತು).**

**<u>ವಾಟೀ ಸವಾಲುಃ ಎಪಿಪಿಯವರಿಂದಃ</u>**

ದಿನಾಂಕ 19.12.2022 ರಂದು ಸಂಜೆ 6.30 ಗಂಟೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಆರೋಪಿ ತ್ಯಾಗರಾಜು ರವರಿಗೆ ಸೇರಿದ ಚೌಡೇಶ್ವರಿ ಪ್ರಾವಿಷನ್ ಸ್ಟೋರ್ ಮುಂಭಾಗದಲ್ಲಿ ಶೋದನಾ ವಾರೆಂಟ್ ಅನ್ನು ಜಾರಿಗೊಳಿಸಲು ಸಾಧ್ಯವಾಗದೇ ಇದ್ದ ಸಮಯದಲ್ಲಿ ಪಕ್ಕದಲ್ಲಿಯೇ ಇದ್ದ ನಿಮ್ಮನ್ನು ಅಮಾನತ್ತು ಪಂಚನಾಮೆಗೆ ಸಾಕ್ಷಿದಾರರನ್ನಾಗಿ ಕೇಳಿಕೊಂಡು ಚೌಡೇಶ್ವರಿ ಪ್ರಾವಿಷನ್ ಸ್ಟೋರ್ ಚಿಲ್ಲರೆ ಅಂಗಡಿಯನ್ನು ಶೋದನಾ ಮಾಡಿದ ಸಮಯದಲ್ಲಿ

ಆರೋಪಿಗೆ ಸೇರಿದ ಒಂದು Plastic ಚೀಲ ಇದ್ದು, ಅದನ್ನು ತೆಗೆದು ನೋಡಲಾಗಿ 180 ಮಿಲಿಯ 24 ಒ ಟಿ Whisky ಟೆಟ್ರಾ ಪ್ಯಾಕ್ ಗಳು ಮತ್ತು 90 ಮಿಲಿಯ 48 ಸಿಲ್ವರ್ ಕಪ್ ಬ್ರಾಂದಿ ಪೌಚ್ ಗಳು ಇರುವುದು ಕಂಡು ಬಂದಿದ್ದು ಸದರಿ ಅಮಾನತ್ತು ಸಮಯದಲ್ಲಿ ಚಾಸಾ-3 ರವರು ಸಹ ಹಾಜರಿದ್ದು, ಸಮಯ 6.30ರಿಂದ ರಾತ್ರಿ 8.00 ಗಂಟೆಯವರೆಗೆ ಅಮಾನತ್ತು ಪಂಚನಾಮೆ ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**